Loss sustained by the K.S.R.T.C.

464 SRI G. RAJUGOWDA (Hanur).—Will the Minister for Transport and Minor Irrigation be pleased to state.—

(a) the amount of loss sustained by the KSRTC during the years 1978-79, 1979-80 and 1980-81;

(b) the capital employed in KSRTC during the year 1980-81;

(c) the earnings per day during the years 1978-79 and 1980-81;

(d) the number of buses owned by the Corporation at present; out of them, the number of buses which are off the road;

(e) the number of buses damaged due to various disturbances in the State, since 1978-79 up till now;

(f) the number of vehicles operated for M. Mahadeshwaraswamy hills fair, since 1978-79 uptil now;

(g) the number of pilgrims travelled in these buses;

(h) the quantum of profit or loss to the Corporation on account of this?

SRI M.M.J. SADYOJATHA (Minister for Transport and Minor Irrigation).—

(a) Loss sustained by the Corporation during.

	(Amount Rs. in lakhs)
1978-79	63.22
1979-80	175.71
1980-81	1096.36

(b) The Capital employed by the Corporation during the year 1980-81 in Rs. 1574 lakhs.

(c) Earnings per day during

	(Rs. in lakhs)
1978-79	20.82
1980-81	28.63

(d) As on 2-1-1982, the KSRTC held 5610 buses of which 807 were in off road, condition awaiting repairs and reconditioning.

(e) 521.

(f) 482.

(g) Adults ... 2,53,654
Children ... 13,482

(h) Profit Rs. 15.37 lakhs.

ಶ್ರೀ ಜಿ. ರಾಜೂಗೌಡ.—ಈ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ೧೯೮೦-೮೧ಕ್ಕೆ ೧೦೯೬.೩೬ ಲಕ್ಷ ನಷ್ಟ ಎಂದು ಹೇಳಿದ್ದೀರಿ. ಯಾವ ಯಾವ ವಿಧದಲ್ಲಿ ಎಷ್ಟಾಗಿದೆ ಅನ್ನುವುದನ್ನು ಹೇಳುತ್ತೀರಾ? ಮತ್ತು ಯಾವ ವಿಭಾಗದಲ್ಲಿ ಎಷ್ಟು ಹೆಚ್ಚು ನಷ್ಟವಾಗಿದೆ ಅನ್ನುವುದನ್ನು ಹೇಳಿ

ತ್ತೀರಾ? ನಾವು ನೋಡಿದ ಹಾಗೆ ದಿನನಿತ್ಯ ಪ್ರಯಾಣಿಕರ ಸಂಖ್ಯೆ ಜಾಸ್ತಿಯಾಗಿದ್ದರೂ ಕೂಡ ಇಷ್ಟು ಹೆಚ್ಚು ನಷ್ಟವಾಗುವುದಕ್ಕೆ ಕಾರಣ ಏನು ಎಂದು ಹೇಳುತ್ತೀರಾ? ಏತಕ್ಕೆ ಇಷ್ಟು ಹೆಚ್ಚು ಖರ್ಚಾಗಿದೆ?

ಶ್ರೀ ಎಂ. ಎ. ಜೆ. ಸದ್ಯೋಜಾತ —ಏತಕ್ಕೆ ಇಷ್ಟು ಹೆಚ್ಚು ಖರ್ಚಾಗಿದೆ ಎಂದರೆ There were two diesel price hikes. There were five Additional D.A. increases. There was a conclusion of industrial truce and the commitment to pay and all round increases in the cost of spare parts and tyres and tubes.

ಶ್ರೀ ಜಿ. ರಾಜೂಗೌಡ.—ನನ್ನ ಪ್ರಶ್ನೆ ಆದಲ್ಲ ೧೯೮೦-೮೧ರಲ್ಲಿ ೧೦೯.೩೬ ಲಕ್ಷ ರೂಪಾಯಿ ನಷ್ಟು ನಷ್ಟವಾಗಿದೆ ಹೇಳಿದ್ದೀರಲ್ಲಾ ಯಾವ್ಯಾವ ವಿಭಾಗದಲ್ಲಿ ಎಷ್ಟೆಷ್ಟು ನಷ್ಟವಾಗಿದೆ ಅನ್ನುವುದನ್ನು ಹೇಳುತ್ತೀರಾ ಅನ್ನುವುದು ನನ್ನ ಮೂಲ ಪ್ರಶ್ನೆ.

ಶ್ರೀ ಎಂ.ಎಂ.ಜೆ. ಸದ್ಯೋಜಾತ —ಅದಕ್ಕೆ ನೋಟೀಸ್ ಬೇಕು.

ಶ್ರೀ ಜಿ. ರಾಜೂಗೌಡ.—ಯಾವ್ಯಾವ ವಿಭಾಗದಲ್ಲಿ ಅತಿ ಹೆಚ್ಚು ನಷ್ಟವಾಗಿದೆ ಮತ್ತು ಸರಾಸರಿ ಪ್ರಯಾಣಿಕರ ಸಂಖ್ಯೆ ಎಷ್ಟು ಅನ್ನುವುದನ್ನಾದರೂ ಹೇಳುತ್ತೀರಾ?

ಶ್ರೀ ಎಂ.ಎಂ.ಜೆ. ಸದ್ಯೋಜಾತ.—ಆ ಬ್ರೇಕ್‌ಅಪ್ ಫಿಗರ್ಸ್ ಈಗ ನನ್ನ ಹತ್ತಿರ ಇಲ್ಲ.

ಶ್ರೀ ಎಂ. ಚಂದ್ರಶೇಖರ್.—ಸ್ವಾಮಿ, ಈ ಪ್ರಶ್ನೆಯ (ಇ)ಗೆ ಉತ್ತರವಾಗಿ ೧೯೭೮-೭೯ನೇ ಸಾಲಿಗೆ ೨೦.೮೨ ಲಕ್ಷ ರೂಪಾಯಿ ಖರ್ಚು ಮಾಡಿದ್ದೀರಿ. ಹಾಗೆಯೇ ೧೯೮೦-೮೧ನೇ ಸಾಲಿಗೆ ೨೮.೬೩ ಲಕ್ಷ ರೂಪಾಯಿ ಖರ್ಚು ಮಾಡಿದ್ದೀರಿ. ಅಂದರೆ ೧೯೮೦-೮೧ಕ್ಕೆ ೮ ಲಕ್ಷ ರೂಪಾಯಿಗಳಷ್ಟು ಹೆಚ್ಚಾಗಿ ಖರ್ಚು ಮಾಡಿದ್ದೀರಲ್ಲಾ ಇದಕ್ಕೆ ಕಾರಣ ಏನು? ಈವಾಗ ನೋಡಿದರೆ ದೈನಂದಿನದ ಉತ್ಪತ್ತಿ ಜಾಸ್ತಿಯಾಗಿದ್ದರೂ ಕೂಡ ಇಷ್ಟು ಹೆಚ್ಚು ನಷ್ಟವಾಗುವುದಕ್ಕೆ ಕಾರಣ ಏನು ಅನ್ನುವುದನ್ನು ಹೇಳುತ್ತೀರಾ?

ಶ್ರೀ ಎಂ.ಎಂ.ಜೆ. ಸದ್ಯೋಜಾತ.—ಆ ವಿವರಗಳು ಈಗ ನನ್ನ ಹತ್ತಿರ ಇಲ್ಲ. ತಾವು ಹೇಳಿದು ದನ್ನು ಪರಿಶೀಲನೆ ಮಾಡುತ್ತೇನೆ.

ಶ್ರೀ ಜೆ.ಹೆಚ್. ಪಟೀಲ್.—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳ ಹತ್ತಿರ ಈಗ ವಿವರ ಇಲ್ಲದೇ ಹೋದರೆ ಆ ಮೇಲೇನೇ ಕೊಡಲಿ. ಇದರ ಮೂಲ ಪ್ರಶ್ನೆ ಏನೆಂದರೆ ಈ ಸರ್ಕಾರ ಬರುವುದಕ್ಕೆ ಮುಂಚೆ ಆಂದರೆ ೧೯೭೮-೭೯ ರಲ್ಲಿ ಬಸ್ಸುಗಳ ಸಂಖ್ಯೆ ಕಡಿಮೆ ಇತ್ತು. ಆವಾಗ ದೈನಂದಿನದ ವರಮಾನವೂ ಸಹ ಕಡಿಮೆ ಇತ್ತು. ಆಗ ನಷ್ಟವೂ ಸಹ ಕಡಿಮೆಯಾಗಿತ್ತು ಈಗ ಬಸ್ಸುಗಳ ಸಂಖ್ಯೆ ಓಡಿಸುವುದನ್ನು ನೋಡಿದರೆ ಒಟ್ಟು ೫೬೧೦ ಇದೆ. ಆದರ ಪೈಕಿ ಕೆಲಸಕ್ಕೆ ಬಾರದೆ ಇರುವುವು ೮೦೭. ಅದು ಜಾತ ಳರ್ಜಿ ಬಸ್ಸುಗಳು ಈಗ ಓಡಾಡುತ್ತಾ ಇವೆ. ೧೯೮೦-೮೧ರಲ್ಲಿ ತಾವು ಅಧಿಕಾರಕ್ಕೆ ಬಂದಮೇಲೆ ಅಂದರೆ ತಮ್ಮ ಸರ್ಕಾರ ಬಂದ ಮೇಲೆ ಇದಕ್ಕೆ ೧೫ ಕೋಟಿ ರೂಪಾಯಿ ಬಂಡವಾಳ ಹಾಕಿದ್ದೀರಿ, ಜೊತೆಗೆ ಬಸ್ಸುಗಳ ಸಂಖ್ಯೆಯನ್ನು ಸಹ ಜಾಸ್ತಿ ಮಾಡಿದ್ದೀರಿ. ಅಲ್ಲದೆ ಈವಾಗ ದೈನಂದಿನದ ವರಮಾನ ಜಾಸ್ತಿ ಇದ್ದರೂ ಸಹ ಹಿಂದಿನ ವರ್ಷದಲ್ಲಿ ೧೦ ಕೋಟಿ ರೂಪಾಯಿ ಲುಕ್ಸಾನು ತೋರಿಸಿದ್ದೀರಿ. ಇನ್ನು ಈ ವರ್ಷ ಎಷ್ಟಾಗಿದೆಯೋ ಗೊತ್ತಿಲ್ಲ. ಪ್ರಯಾಣಿಕರ ಸಂಖ್ಯೆ ನೋಡಿದರೆ ಜಾಸ್ತಿಯಾಗಿದೆ. ಈ ಒಂದು ಹಿನ್ನೆಲೆಯಲ್ಲಿ ಹೇಳಬೇಕಾದರೆ ಈ ರೀತಿ ನಷ್ಟ ಅನ್ನುವುದಾದರೆ ಇದಕ್ಕೇನಾದರೂ ಒಂದು ಮುಖ್ಯ ಕಾರಣವಿರಬಹುದು. ಆದರೆ ನೀವು ಹೇಳುವಂಥಾ ಕಾರಣ ಸರಿ ಅಲ್ಲ. ನೀವು ಹೇಳುವುದು ಏನೆಂದರೆ ಡೀಲ್ ಪೈಪ್ಸ್ ಹೈಕ್ಸ್, ಸ್ಪೇರ್ ಪಾರ್ಟ್ಸ್, ಟೈರ್ ಮತ್ತು ಡ್ಯೂಬ್ಸ್ ಬೆಲೆ ಜಾಸ್ತಿ ಎಂದು. ಹಾಗಾದರೆ ನಾನು ಹೇಳುತ್ತೇನೆ .ಈಪೊತ್ತಿನ ದಿವಸ ನೀವು ಬಸ್ಸುಗಳ ಸಂಖ್ಯೆಯನ್ನು ಜಾಸ್ತಿ ಮಾಡಿದ್ದೀರಿ, ಪ್ರಯಾಣಿಕರ ಸಂಖ್ಯೆ ಜಾಸ್ತಿಯಾಗಿದೆ ಇದು ಕಾರಣವಲ್ಲ. ಮೇಲಾಗಿ ಕಡಿಮೆ ಸಂಖ್ಯೆಯಲ್ಲಿರತಕ್ಕಂಥಾ ಖಾಸಗಿಯವರ ಬಸ್ಸು ಏನು ಇದೆ ಒಂದೆರಡು ಬಸ್ಸುಗಳನ್ನು ಇಟ್ಟುಕೊಂಡಿರುವವರು ಹೆಚ್ಚು ಲಾಭಗಳಿಸುವಾಗ ನೀವು ಇಷ್ಟು ನಷ್ಟವನ್ನು ತೋರಿಸುತ್ತಾ ಇರುವುದು ಸರಿಯೇ? ಇಷ್ಟೊಂದು ದೊಡ್ಡ ಪ್ರಮಾಣ ಆಂದರೆ ಳರ್ಜಿ ಬಸ್ಸುಗಳನ್ನಿಟ್ಟುಕೊಂಡು ದೈನಂದಿನದ ಪ್ರಯಾಣಿಕರ ಸಂಖ್ಯೆ ಜಾಸ್ತಿ ಇದ್ದರೂ ಇಷ್ಟು ಆಂದರೆ ೧೦ ಕೋಟಿ ರೂಪಾಯಿ ನಷ್ಟವನ್ನು ತೋರಿಸುತ್ತಿದ್ದೀರಲ್ಲಾ ಇದಕ್ಕೆ ಮುಖ್ಯ ಕಾರಣ ಏನು?

ಶ್ರೀ ಎಂ. ಎಂ. ಜೆ. ಸದ್ಯೋಜಾತ.— ನನ್ನ ಹತ್ತಿರ ಹೆಚ್ಚು ವಿವರಗಳು ಇಲ್ಲ. ಆ ಮೇಲೆ ಒದಗಿಸಿಕೊಡುತ್ತೇನೆ.

ಶ್ರೀ ಜೆ.ಹೆಚ್. ಪಟೇಲ್.—ಆ ಮೇಲೆನೇ ಒದಗಿಸಿ ಕೊಡಲಿ. ನಾನು ಹೇಳುವುದನ್ನು ತಾವು ಗಮನ ಇಡಬೇಕು. ಡೀಸಲ್ ಪ್ರೈಸ್ ಹೈಕ್ಸ್, ಸ್ಪೇರ್ ಪಾರ್ಟ್ಸ್‌ನ ಕಾಸ್ಟ್ ಜಾಸ್ತಿ, ಟೈರ್ ಟೂಬ್ ಬೆಲೆ ಜಾಸ್ತಿ ಆನ್ನುವ ಕಾರಣವಲ್ಲ. ಟಿಕೆಟ್ ಇಷ್ಯೂ ಮಾಡುವ ಕಂಡಕ್ಟರ್ಸ್ ಏನು ಮನೆ ಕಟ್ಟಿಕೊಂಡಿದ್ದಾರೆ, ಡ್ರೈವರ್ಸ್ ಏನು ಮನೆ ಕಟ್ಟಿ ಕೊಂಡಿದ್ದಾನೆ, ಅದನ್ನೇನಾದರೂ ಕಂಡುಹಿಡಿದು ಅವರಿಗೇನಾದರೂ ಶಿಕ್ಷೆ ಮಾಡಿದ್ದೀರಾ?

ಶ್ರೀ ಎಂ.ಎಂ.ಜೆ. ಸದ್ಯೋಜಾತ.—ನನಗೆ ಗೊತ್ತಿಲ್ಲಾ. ತಮಗೆ ಗೊತ್ತಿದ್ದರೆ ತಿಳಿಸಿದರೆ ತಕ್ಕ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಜೆ.ಹೆಚ್. ಪಟೇಲ್.—ಹೋಗಲಿ, ಹೋದ ವರ್ಷ ಒಂದು ಡಿಪೋನಲ್ಲಿ ಬಸ್ಸು ಹೋಯಿತಲ್ಲಾ ಅದು ಸಿಕ್ಕಿತೇ?

ಅಧ್ಯಕ್ಷರು.—ಅದು ಸಿಕ್ಕಿತು ಎಂದು ಹೋದ ವರ್ಷವೇ ಅದಕ್ಕೆ ಉತ್ತರ ಹೇಳಿದ್ದಾರಲ್ಲಾ.

ಶ್ರೀ ಜಿ. ರಾಜೂಗೌಡ.—ಸ್ವಾಮಿ, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯವರು ಅಪಾರವಾದ ನಷ್ಟವನ್ನು ಅನುಭವಿಸುತ್ತಿರುವುದರಿಂದ ಇದನ್ನು ಪರಿಶೀಲಿಸುತ್ತೇವೆ ಎಂದು ಹೇಳುವುದರ ಬದಲು ಪ್ರಮುಖವಾದ ಮಾರ್ಗಗಳನ್ನು ಸರ್ಕಾರದವರೇ ಇಟ್ಟುಕೊಂಡು ಉಳಿದವುಗಳನ್ನು ಖಾಸಗಿಯವರಿಗೆ ಕೊಡುವುದಕ್ಕೆ ಉಚಿತವಾದ ಒಂದು ಆಶ್ವಾಸನೆಯನ್ನು ಕೊಡುತ್ತಾರೆಯೇ?

ಶ್ರೀ ಎಂ ಎಂ.ಜೆ. ಸದ್ಯೋಜಾತ.—ಇದಕ್ಕಾಗಿ ಶ್ರೀ ಆರ್ಮುಗಂ ಕಮಿಟಿ ಅಂತ ನೇಮಕ ಮಾಡಿದ್ದೇವೆ. ಅವರ ರಿಪೋರ್ಟ್ ಬಂದನಂತರ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಸಿ.ಎಂ. ಇಬ್ರಾಹಿಂ.—ಈ ಕೆ.ಎಸ್.ಆರ್.ಟಿ.ಸಿ.ಯವರು ಹೊರಗಡೆ ಕೊಳ್ಳಕ್ಕಿಂತಾ ಸ್ಪೇರ್ ಪಾರ್ಟ್ಸ್‌ಗಳನ್ನು ಮತ್ತು ರಿಪೇರಿಗಾಗಿ ಬಸ್ಸುಗಳನ್ನು ಹೊರಗಡೆ ಕಳುಹಿಸಿರತಕ್ಕಂಥಾದ್ದನ್ನೂ ಸಹ ನಿಲ್ಲಿಸಿ ನಮ್ಮ ರಾಜ್ಯದಲ್ಲೇ ಕೊಂಡುಕೊಳ್ಳುವುದಕ್ಕೆ ಹಾಗೂ ಇಲ್ಲೇ ರಿಪೇರಿ ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತಾರೆಯೇ? ಹೊರಗಡೆ ಇದನ್ನು ಕೊಂಡುಕೊಳ್ಳುವುದರಿಂದ ಮತ್ತು ಬಸ್ಸುಗಳನ್ನು ಹೊರಗಡೆ ರಿಪೇರಿಗೆ ಕಳುಹಿಸುವುದರಿಂದ ಹೆಚ್ಚು ಖರ್ಚಾಗುವುದಲ್ಲದೆ ನಷ್ಟವೂ ಆಗುವುದಕ್ಕೆ ಕಾರಣವಾಗುತ್ತದೆ. ಇದನ್ನು ತಪ್ಪಿಸಲು ಹಾಗೂ ನಮ್ಮ ರಾಜ್ಯದ ಕೈಗಾರಿಕೆ ಹೆಚ್ಚು ಬೆಳೆಯುವುದಕ್ಕೆ ಪ್ರೋತ್ಸಾಹ ಕೊಡಲು ತಕ್ಕ ವ್ಯವಸ್ಥೆ ಮಾಡುತ್ತಾರೆಯೇ? ಹೊರ ರಾಜ್ಯದಲ್ಲಿ ಇದನ್ನು ರಿಪೇರಿಗೆ ಕೊಡುವ ಬದಲು ನಮ್ಮಲ್ಲಿ ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ?

ಶ್ರೀ ಎಂ.ಎಂ.ಜೆ. ಸದ್ಯೋಜಾತ.—ಅದು ಒಳ್ಳೆಯ ಸಲಹೆ. ಅದನ್ನು ಪರಿಶೀಲನೆ ಮಾಡುತ್ತೇನೆ.

ಶ್ರೀ ಸಿ.ಎಂ. ಇಬ್ರಾಹಿಂ.—ಈವಾಗ ಇದರಲ್ಲಿ ಅಡ್ಮಿನಿಸ್ಟ್ರೇಟೀವ್ ಎಕ್ಸ್‌ಪೆನ್ಸ್‌ಗ್ ಜಾಸ್ತಿ ಇರುವುದರಿಂದ ಈಗ ಒಂದೊಂದರಲ್ಲಿ ೪-೫ ಜನ ಡಿ.ಜಿ.ಎಂ. ಏನು ಇದ್ದಾರೆ ಅವರು ಜಾಸ್ತಿ ಇರುವುದರಿಂದ ಹಾಗೂ ಈ ಕೆ.ಎಸ್.ಆರ್.ಟಿ.ಸಿ.ಯ ಆಡಳಿತದಲ್ಲಿ ಖರ್ಚು ಕಡಿಮೆ ಮಾಡುವ ದೃಷ್ಟಿಯಿಂದ ಕೆಲವು ಪೋಸ್ಟ್‌ಗಳನ್ನು ಅಬಾಲಿಷ್ ಮಾಡಿ ಆದರಲ್ಲಿ ಆಗತಕಂಥಾ ನಷ್ಟವನ್ನು ತುಂಬಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀ ಎಂ.ಎಂ.ಜೆ. ಸದ್ಯೋಜಾತ. ಅದಕ್ಕಾಗಿ ಈಗ ಆರ್ಮುಗಂ ಕಮಿಟಿ ಒಂದನ್ನು ನೇಮಕ ಮಾಡಿದ್ದೇವೆ. ಅದರ ರಿಪೋರ್ಟ್ ಬಂದಮೇಲೆ ಸೂಕ್ತವಾಗಿ ಪರಿಶೀಲನೆ ಮಾಡಿ ಯೋಗ್ಯವಾದ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಆಜೀಜ್‌ಸೇಠ್.—ಮಾನ್ಯ ಮಂತ್ರಿಯವರು ಶ್ರೀ ಆರ್ಮುಗಂ ಕಮಿಟಿಯನ್ನು ಮಾಡಿದ್ದೇವೆ ಎಂದು ಹೇಳಿದ್ದಾರೆ, ಆ ಕಮಿಟಿಯ ಲೈಫ್ ಎಕ್‌ಪೈರ್ ಆಗಿದೆ, ಅದಕ್ಕೆ ಮಂತ್ರಿ ಜೀವ ಕೊಟ್ಟಿದ್ದಾರೆಯೇ?

ಶ್ರೀ ಎಂ. ಎಂ. ಜೆ. ಸದ್ಯೋಜಾತ.—ಅದಕ್ಕೆ ಜೀವದಾನ ಕೊಡುವುದಕ್ಕೆ ನಾವು ಶಿಫಾರಸು ಮಾಡಿದ್ದೇವೆ.

ಶ್ರೀ ಪಿ. ರಾಮದೇವ್.—ಸ್ವಾಮಿ, ಮಾನ್ಯ ಮಂತ್ರಿಯವರು ಹೇಳಿದರು, ಶ್ರೀ ಆರ್ಮುಗಂ ಕಮಿಟಿಯನ್ನು ಮಾಡಿದ್ದೇವೆಂದು. ಈ ಕೆ.ಎಸ್. ಆರ್. ಟಿ.ಸಿಯ ಫೈನಾನ್ಸಿಯಲ್ ಪೊಜಿಷನ್ ಬಗ್ಗೆ ಆವರು ವರದಿಯನ್ನು ಕೊಡಬೇಕೆಂದು ಹೇಳಿದ್ದಾರೆ. ಈ ಕೆಎಸ್ಆರ್‌ಟಿಸಿ ಬಸ್ ಹೇಗೆ ಬ್ರೇಕ್ ಇಲ್ಲದೇ ಓಡಾಡಿಕೊಂಡು ಇದೆಯೋ ಹಾಗೆ ಆ ವರದಿಯೂ ಅಲ್ಲಿಂದ ಇಲ್ಲಿಗೆ ಇಲ್ಲಿಂದ ಅಲ್ಲಿಗೆ ಓಡಾಡಿಕೊಂಡು ಇದೆಯೋ ?

ಶ್ರೀ ಎಂ. ಎಂ. ಜೆ. ಸದ್ಯೋಜಾತ.—ಇದಕ್ಕೆ ನಾನೇನೂ ಹೇಳುವುದಕ್ಕಾಗುವುದಿಲ್ಲ.

ಶ್ರೀ ಎಚ್. ಗಂಗಾಧರನ್,—ಸ್ವಾಮಿ, ಇಲ್ಲಿ (ಊ) ಪ್ರಶ್ನೆಗೆ ಕೊಟ್ಟಿರತಕ್ಕಂಥ ಉತ್ತರದಲ್ಲಿ ೧೯೭೮-೭೯ ರಿಂದ ಇಲ್ಲಿಯಂವರೆಗೆ ಮಹದೇಶ್ವರಸ್ವಾಮಿಯ ಜಾತ್ರೆಗಾಗಿ ಓಟ್ಟು ೪೮೨ ಬಸ್‌ಗಳನ್ನು ಓಡಿಸಲಾಗಿದೆ ಮತ್ತು ೧೫.೭೭ ಲಕ್ಷರೂಪಾಯಿಗಳಷ್ಟು ಲಾಭ ಬಂದಿದೆ ಎಂದು ಹೇಳಿದ್ದಾರೆ. ಈ ಮಹದೇಶ್ವರನ ಬೆಟ್ಟಕ್ಕೆ ಸಾಮಾನ್ಯವಾಗಿ ಕರ್ನಾಟಕ ರಾಜ್ಯದ ಎಲ್ಲಾ ಜಿಲ್ಲೆಗಳಿಂದಲೂ ಜನರು ಹೋಗುತ್ತಾರೆ. ಆದ್ದರಿಂದ ಎಲ್ಲಾ ಜಿಲ್ಲೆಗಳಿಂದಲೂ ಅಲ್ಲಿಗೆ ಬಸ್‌ಗಳನ್ನು ಓಡಿಸುವುದಕ್ಕೆ ಏರ್ಪಾಡು ಮಾಡಿ ಆ ಮೂಲಕ ಜನಗಳಿಗೆ ಅನುಕೂಲ ಮಾಡಿಕೊಡುತ್ತೀರಾ?

ಶ್ರೀ ಎಂ. ಎಂ. ಜೆ. ಸದ್ಯೋಜಾತ.—ಈ ವಿಚಾರದಲ್ಲಿ ನಾನು ಪರಿಶೀಲನೆ ಮಾಡಿ ಆದಷ್ಟುಬೇಗ ಕ್ರಮ ಕೈಕೊಳ್ಳುತ್ತೇನೆ.

Fishing rights of Cauvery river

467 SRI G. RAJUGOWDA (Hanur)— Will the Minister of State for Fisheries and Ports be pleased to state.—

(a) whether it has come to the notice of Government that the income of Government has been curtailed for not giving the fishing rights to any body either on auction or on lease, though there are plenty of fishes available in Hogenakal river of Kollegal Taluk, if so, the reasons therefor,

(b) whether it has come to the notice of Government that the people of Tamilnadu are fishing daily and thereby earning by illegal means?

SRI D. B. PAWAR (Minister of State for Fisheries and Ports).— .

(a) The fishing rights of Cauvery river from Mekedatu near Kanakapura upto Hogenakal in Kollegal Taluk has not been given to anybody either on auction or on lease basis for the present.

The main reasons are, the river Cauvery flows in between the areas belonging to Karnataka and Tamilnadu States upto Hogenakal boundary and the dispute raised by the Director of Fisheries, Government of Tamilnadu about the fishing rights.

(b) It has come to the notice, that the people of Tamilnadu are not fishing in our area.

ಶ್ರೀ ಜಿ. ರಾಜುಗೌಡ.—ಸ್ವಾಮಿ, ಮೇಕೆದಾಟಿನಿಂದ ಹೊಗೇನಕಲ್‌ವರೆಗೆ ಸುಮಾರು ೮೦ ಮೈಲಿ ಉದ್ದವಿರುವ ಕಾವೇರಿನದಿಯಲ್ಲಿ ಮೀನು ಹಿಡಿಯತಕ್ಕಂಥ ಹಕ್ಕನ್ನು ರಾಜ್ಯಸರ್ಕಾರ ಹೊಂದಿರತಕ್ಕಂಥ ಸಂದರ್ಭದಲ್ಲಿ ಕೂಡ ತಮಿಳುನಾಡು ಸರ್ಕಾರದವರು ಅದಕ್ಕೆ ಆಕ್ಷೇಪಣೆಯನ್ನು ಎತ್ತಿದ್ದಾರೆ. ಇದರ ಬಗ್ಗೆ ಸರ್ಕಾರದವರ ಪ್ರತಿಕ್ರಿಯೆ ಏನು ಎಂಬುದನ್ನು ತಿಳಿಯುವುದಕ್ಕೆ ನಾನು ಇಚ್ಛಿಪಡುತ್ತೇನೆ.